

ಇಯರ್ ಫೋನ್‌ಗಳನ್ನೋ
ಹೆಡ್ ಫೋನ್‌ಗಳನ್ನೋ
ತಗುಲಿಸಿಕೊಂಡು ಓಡಾಡುವ
ತರುಣ ತರುಣಿಯರು
ಸಾರ್ವಜನಿಕ ಸ್ಥಳಗಳಲ್ಲಿ
ಸಾಕಷ್ಟು ಸಂಖ್ಯೆಯಲ್ಲಿ
ಕಾಣಸಿಗುತ್ತಾರೆ. ಮುಂಬರುವ
ತಲೆಮಾರುಗಳಲ್ಲಿ
ತಾಂತ್ರಿಕ ಸಲಕರಣೆಗಳನ್ನು
ದೇಹದೊಳಗೇ
ಅಳವಡಿಸಿಕೊಂಡು
ಓಡಾಡುವವರ ಸಂಖ್ಯೆ
ಹೆಚ್ಚಲಿದೆ. ದೇಹದಲ್ಲಿ
ಎಲೆಕ್ಟ್ರಾನಿಕ್ಸ್ ಉಪಕರಣ
ಅಥವಾ ಮನುಷ್ಯನ
ಅಂಗಗಳನ್ನು ಹೋಲುವ
ಇಂಪ್ಲಾಂಟ್‌ಗಳನ್ನು
ಹೊಂದಿರುವವರನ್ನು
ತಾಂತ್ರಿಕ ಭಾಷೆಯಲ್ಲಿ
'ಸೈಬೋರ್ಗ್' ಎನ್ನುತ್ತಾರೆ.
ವಿಶ್ವದಲ್ಲಿ ಈಗಾಗಲೇ ಇಂಥ
ಸೈಬೋರ್ಗ್‌ಗಳು ಇಪ್ಪತ್ತು
ಸಾವಿರ ಮಂದಿಯಿದ್ದಾರೆ.
ಮುಂದಿನ ಶತಮಾನ
'ಸೈಬೋರ್ಗ್‌ಗಳ ಶತಮಾನ'
ಎನ್ನುವುದು ಸಂಶೋಧಕರ
ಲೆಕ್ಕಾಚಾರ.

■ ಗುರುರಾಜ್ ಎಸ್. ದಾವಣಗೆರೆ